Indian Journal of History and Archaeology

ISSN (E):2582-225X
VOL-1 ,ISSUE -5, JAN-FEB, 2020, 39-48

# ಭಾರತೀಯ ಮಹಿಳೆಯರ ಸಂವಿಧಾನಾತ್ಮಕ ಸಂರಕ್ಷಣೆಗಳು

**ಡಾ.ಕೆ.ಎಸ್.ಶ್ವೇತಕುಮಾರಿ**

**ಡಾ.ಕೆ.ಎಸ್.ಶ್ವೇತಕುಮಾರಿ**
ಉಪನ್ಯಾಸಕರು,
ರಾಜ್ಯಶಾಸ್ತ್ರ ವಿಭಾಗ
ಸರ್ಕಾರಿ ಪ್ರಥಮ ದರ್ಜೆ
ಕಾಲೇಜು, ಬನ್ನೂರು

ಆದಿ ಮಾನವನ ಸಮಾಜ ಮತ್ತು ಆ ನಂತರ ಸಮಾಜದಲ್ಲಿ ಮಾತೃಪ್ರಧಾನ ವ್ಯವಸ್ಥೆಯೂ ಅಸ್ತಿತ್ವದಲ್ಲಿದ್ದ ಕಾಲದಲ್ಲಿ ಮಹಿಳೆಯರ ಸ್ಥಾನಮಾನಗಳು ಪುರುಷನಷ್ಟೇ ಸಮಾನವಾಗಿದ್ದವು. ಬೇಟೆಯಲ್ಲಿ, ಆಹಾರ ಸಂಗ್ರಹಣೆಯಲ್ಲಿ, ಅನಂತರ ನೆಲೆನಿಂತಾಗ ಕೃಷಿ ಉತ್ಪನ್ನ ಚಟುವಟಿಕೆಯಲ್ಲಿಯೂ ಕೂಡ ಪುರುಷನ ಜೊತೆಜೊತೆಗೆ ತನ್ನ ಸಾಮರ್ಥ್ಯ ಮತ್ತು ಪ್ರತಿಭೆಗಳನ್ನು ಮೆರೆಯುತ್ತಿದ್ದ ಮಹಿಳೆ ಅನಂತರ ಕಾಲದಲ್ಲಿ ಪುರುಷನ ಗುಲಾಮಳಾಗಿ ಮಾರ್ಪಟ್ಟಳು. ಅದಕ್ಕೆ ಮಾನವನ ಬದುಕಿನಲ್ಲಿ ಉಂಟಾದಂಥ ಅನೇಕ ಪರಿವರ್ತನೀಯ ಅಂಶಗಳು ಹಾಗೂ ಅಲ್ಲಿನ ಸ್ಥಿತ್ಯಾಂತರಗಳೇ ಕಾರಣವಾಗಿರುವಂತೆ ಹೆಚ್ಚಿನ ರೀತಿಯಲ್ಲಿ ತೋರುತ್ತದೆ. ಮಾನವ ನಿರ್ಮಿತವಾದಂಥ ಸಮಾಜದಲ್ಲಿ ಕೃಷಿಯು ಆವಿಷ್ಕಾರವಾದ ಮೇಲೆ ಮಹಿಳೆ ಪುರುಷರ ನಡುವಿನ ಸ್ಥಾನಮಾನಗಳು ಪಲ್ಲಟಗೊಂಡಿರಬೇಕು. ಮಹಿಳೆಗೆ ಪುರುಷನಿಗಿಂತ ಬೇರೆಯಾದ ಕೆಲವು ಜೈವಿಕ ಕಾರಣಗಳಿದ್ದವು. ಉದಾಹರಣೆಗೆ ಋತುಮತಿ, ತಿಂಗಳ ಮುಟ್ಟಾಗುವಿಕೆ, ಹೆರಿಗೆಯ ಪರಿಸ್ಥಿತಿಗಳು, ಆಕೆಯ ದೈಹಿಕ ಸಾಮರ್ಥ್ಯವನ್ನು ತಕ್ಕಮಟ್ಟಿಗೆ ಕುಗ್ಗಿಸುತ್ತಿದ್ದವು. ಇಂಥ ಪರಿಸ್ಥಿತಿಯನ್ನು ತನ್ನ ಹಿತಕ್ಕೆ ತಿರುಗಿಸಿಕೊಳ್ಳುವಲ್ಲಿ ಪುರುಷ ಆಲೋಚಿಸಿರಬೇಕು. ಒಂದು ಗುಂಪಿಗೂ, ಮತ್ತೊಂದು ಗುಂಪಿಗೂ ಆ ಕಾಲದಲ್ಲಿ ನಡೆಯುತ್ತಿದ್ದ ಸಂಘರ್ಷಗಳು ಪುರುಷನ ಪ್ರಾಧಾನ್ಯತೆಯನ್ನು ಹೆಚ್ಚಿಸುವಲ್ಲಿ ಕಾರಣವಾಗಿರುತ್ತವೆ. ತನ್ನ ಸಂತಾನವನ್ನು ವೃದ್ಧಿಸಿಕೊಳ್ಳುವಲ್ಲಿ ಮತ್ತು ಗುಂಪಿಗೆ ತಾನು ಒಡೆಯನಾಗಿ ಗುರುತಿಸಿಕೊಳ್ಳುವಲ್ಲಿ

ಮಹಿಳೆಯರ ಮೇಲೆ ಪುರುಷ ತನ್ನ ಪ್ರಭುತ್ವದ ಮೂಲಕ ತನ್ನದೇ ಆದಂಥ ರೀತಿಯಲ್ಲಿ ಅಧಿಕಾರವನ್ನು ಸ್ಥಾಪಿಸುತ್ತಾ ನಡೆದಿರಬೇಕು. ಈ ಸಾಧನೆಗಾಗಿ ಮಹಿಳೆ

ಯಾವತ್ತೂ ಪುರುಷವಲಂಬಿಯಾಗಿರುವಂತೆ ಧಾರ್ಮಿಕ, ಕಾನೂನು ಕಟ್ಟಳೆಗಳನ್ನು ತನಗೆ ಅನುಕೂಲಕರವಾಗಿರುವಂತೆಯೇ ರೂಪಿಸುತ್ತಾ ಬಂದನು. ಹಾಗೆ, ನೋಡಿದರೆ ಪುರುಷ–ಪುರುಷನನ್ನು ಗುಲಾಮನನ್ನಾಗಿಸಿಕೊಳ್ಳುವ ಪೂರ್ವದಲ್ಲಿಯೇ ಮಹಿಳೆಯರನ್ನು ಗುಲಾಮಳನ್ನಾಗಿಸಿಕೊಂಡ ವೈದಿಕ ಕಟ್ಟು ಕಟ್ಟಳೆಗಳಗೆ ದೈವಿಕ ಸ್ವರೂಪವನ್ನು ಆರಾಧಿಸುವ ಸುಮತಿ ಭಾರ್ಗವನೆಂಬ ಸಾಮವೇಧಿ ಬ್ರಾಹ್ಮಣನು ತನ್ನ ಮನುಧರ್ಮಶಾಸ್ತ್ರದಲ್ಲಿ ಮಹಿಳೆಯರ ಮೇಲೆ ವಿಧಿಸಿದ ನಿರ್ಬಂಧಗಳನ್ನು ನೋಡಿದರೆ, ಇವರನ್ನು ಕೂಡ ಅಸ್ಪೃಶ್ಯರಷ್ಟೇ ಅತ್ಯಂತ ಕೆಳಗಿನ ಸ್ಥಾನದಲ್ಲಿ ಇಟ್ಟಿರುವುದು ಇತಿಹಾಸದಲ್ಲಿ ನೈಜ ಸತ್ಯ. ಇದನ್ನು ಎಲ್ಲಾ ಸಮುದಾಯದಲ್ಲಿನ ಪ್ರತಿಯೊಬ್ಬ ಮಹಿಳೆಯೂ ಅರಿಯುವುದು ಅವಶ್ಯಕ ಹಾಗೂ ಅನಿವಾರ್ಯವೂ ಕೂಡ. ಸುಮತಿ ಭಾರ್ಗವನ ಮನುಧರ್ಮಶಾಸ್ತ್ರದಲ್ಲಿನ ತನ್ನ ಅಭಿಪ್ರಾಯದಲ್ಲಿ ಮಹಿಳೆಯರು ಸ್ವತಂತ್ರರಾಗಿರತಕ್ಕದಲ್ಲ. ಅವುಗಳು ಈ ಕೆಳಕಂಡಂತೆ ದಾಖಲಿಸಲಾಗಿದೆ. ಅವುಗಳೆಂದರೆ;

1. ಮಹಿಳೆಯರು ಹಗಲು ರಾತ್ರಿಯು ಪುರುಷರ ಅಧೀನದಲ್ಲಿರಬೇಕು. ವಿಷಯಾಸಕ್ತರಾಗಿದ್ದರೆ ಸ್ವಂತ ನಿಯಂತ್ರಣದಲ್ಲಿರಿಸಬೇಕು.
2. ಎಂಥ ಸೂಕ್ಷ್ಮ ಪ್ರಸಂಗದಲ್ಲೂ ಮಹಿಳೆಯರನ್ನು ವಿಶೇಷವಾಗಿ ರಕ್ಷಿಸಬೇಕು. ಆಕೆಯೂ ಆರಕ್ಷಿತಳಾದ ಈಕೆಯು ಎರಡು ಕುಲಗಳಗೆ ಶೋಕತರುತ್ತಾಳೆ.
3. ಪುರುಷರು ದುರ್ಬಲರಾದಾಗಲೂ, ಸರ್ವವರ್ಣಗಳ ಉತ್ತಮ ಧರ್ಮವೆಂದು ಹೆಂಡತಿಯನ್ನು ರಕ್ಷಿಸಬೇಕು.
4. ಬಾಲಕಿಯಾಗಲೀ, ಯುವತಿಯಾಗಲೀ ಹಾಗೂ ವೃದ್ಧೆಯಾಗಲೀ, ತನ್ನ ಮನೆಯಲ್ಲೂ ಸ್ವತಂತ್ರವಾಗಿ ಯಜಮಾನನ್ನು ಕೇಳದೇ ಏನನ್ನೂ ಮಾಡಬಾರದು.
5. ಬಾಲ್ಯದಲ್ಲಿ ತಂದೆಯ, ಯವ್ವನದಲ್ಲಿ ಕೈಹಿಡಿದವನ, ಅವನಿಲ್ಲದಿದ್ದರೆ ಮುಪ್ಪಿನಲ್ಲಿ ಗಂಡು ಮಕ್ಕಳ ವಶದಲ್ಲಿರಿಸಬೇಕು. ಮಹಿಳೆಯೂ ಎಂದೂ ಸ್ವತಂತ್ರಳಾಗಿರಬಾರದು.
6. ತಂದೆ, ಗಂಡ ಅಥವಾ ಗಂಡು ಮಕ್ಕಳಿಂದ ಮಹಿಳೆ ಬೇರೆಯಾಗಬಯಸಬಾರದು. ಅವರನ್ನು ಬಿಟ್ಟರೆ, ಗಂಡನ ಹಾಗೂ ತಂದೆಯ ಎರಡು ಕುಲಗಳು ದೂಷಣೆಗೆ ಗುರಿಯಾಗುತ್ತಾಳೆ ಎಂದು ಮನು ತನ್ನ ಸ್ಮೃತಿಯ ಅನೇಕ ಶ್ಲೋಕಗಳಲ್ಲಿ ತಿಳಸಿದ್ದಾನೆ.

ಹೀಗೆ, ಮಹಿಳೆಯ ಮೇಲೆ ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ಕಟ್ಟುಪಾಡುಗಳನ್ನು ಹೇರಿ ಅವಳ ವ್ಯಕ್ತಿತ್ವ ವಿಕಾಸವಾಗದಂತೆ ತಡೆಯೊಡ್ಡಲಾಗಿರುತ್ತದೆ. ಈ ರೀತಿ ಮಹಿಳೆಯರನ್ನು ಬಂಧನದಲ್ಲಿಟ್ಟಿರುವ

ವೈದಿಕ ಧರ್ಮ ನಮಗೆ ಬೇಕೇ ಎಂಬಂಥ ಪ್ರಶ್ನೇಗಳೊಂದಿಗೆ ಇಂಥ ಸಮಷ್ಟಿ ಮಹಿಳಾ ಸಮುದಾಯವು ಕುಲಂಕುಷವಾಗಿ ಆಲೋಚನೆಯನ್ನು ಮಾಡಬೇಕಾಗಿದೆ.

ಸುಮತಿ ಭಾರ್ಗವನ ಪೂರ್ವ ಕಾಲದ ಭಾರತೀಯ ಮಹಿಳೆಯರ ಸ್ಥಾನಮಾನಗಳು ಉತ್ತಮವಾಗಿದ್ದು, ಸುಮತಿ ಭಾರ್ಗವನ ಕಾಲಕ್ಕೆ ಮಹಿಳೆಯರ ಶೋಷಣೆ ಆರಂಭವಾಯಿತು. ಅದಕ್ಕೆ ಅನೇಕ ಸಾಮಾಜಿಕ ಹಾಗೂ ಧಾರ್ಮಿಕವಾದ ಪ್ರಮುಖ ಕಾರಣಗಳು ಇರುವುದನ್ನು ಗುರುತಿಸಬಹುದು. ಅದೇನೆಂದರೆ; 'ಭಾರತದಲ್ಲಿ ಮಹಿಳೆಯರ ತುಚ್ಛೀಕರಣಕ್ಕೆ ಸುಮತಿ ಭಾರ್ಗವ ಕಾರಣ ಎಂಬುದರಲ್ಲಿ ಯಾರಾದರೂ ಅನುಮಾನ ಪಡುತ್ತಾರೆಯೇ? ಬಹಳಷ್ಟು ಮಂದಿಗೆ ಈ ವಿಷಯ ಗೊತ್ತಿದೆ. ಆದರೆ, ಅವರಿಗೆ ಎರಡು ವಿಷಯಗಳು ಗೊತ್ತಿಲ್ಲ. ಮಹಿಳೆಯರನ್ನು ಕುರಿತಂತೆ; ಮನು ಹೊಸದಾಗಿ ಏನನ್ನೂ ಹೇಳಲ್ಲ. ಅವೆಲ್ಲಾ ಬ್ರಾಹ್ಮಣಶಾಹಿತ್ವದ ಆರಂಭ ಕಾಲದ ದೃಷ್ಟಿಕೋನಗಳಾಗಿವೆ. ಮನು ಪೂರ್ವ ಕಾಲದಲ್ಲಿ ಇವುಗಳನ್ನು ಸಾಮಾಜಿಕ ಸಿದ್ಧಾಂತಗಳಿಂದ ರಾಜ್ಯದ ಸಿದ್ಧಾಂತಗಳನ್ನಾಗಿ ಪರಿವರ್ತಿಸಿದನು. ಅವರಿಗೆ ತಿಳಿಯದ ಎರಡನೇ ವಿಷಯವೆಂದರೆ; ಮನು ಮಹಿಳೆಯರ ಮೇಲೆ ಈ ಎಲ್ಲಾ ನಿರ್ಬಂಧಗಳನ್ನು ಏಕೆ ಹೇರಿದ ಎಂಬುದನ್ನು ಮಹಿಳೆ ಮತ್ತು ಶೂದ್ರ, ಆರ್ಯ ಸಮಾಜದ ಎರಡು ಪ್ರಧಾನವರ್ಗಗಳಾಗಿದ್ದವು ಎಂದು ಹೇಳಬಹುದು.

ಪುರುಷ ಮಹಿಳೆಯರನ್ನು ಅಂಕಿತದಲ್ಲಿರಿಸಿಕೊಳ್ಳುವುದರ ಸಲುವಾಗಿಯೇ ಅವುಗಳಲ್ಲಿ ಪ್ರಬುದ್ಧತೆಗೆ (ಒಚಿಣಣಡಿಣಥಿ) ಬರುವ ಮೊದಲೇ ವಿವಾಹ ಮಾಡುವ ಪದ್ಧತಿ ವೈದಿಕ ಸಂಸ್ಕೃತಿಯಲ್ಲಿ ರೂಢಿಯಲ್ಲಿತ್ತು. ಪುರುಷ ಒಂದಕ್ಕಿಂತ ಹೆಚ್ಚು ಮಹಿಳೆಯರನ್ನು ಮದುವೆಯಾಗುವ ಅಧಿಕಾರವನ್ನು ಪಡೆದುಕೊಂಡರೆ, ಮಹಿಳೆಗೆ ಒಬ್ಬನೇ ಗಂಡನೆಂಬ ನಿಯಮವನ್ನು ಜಾರಿಗೊಳಿಸಲಾಗಿರುತ್ತದೆ. ದೊಡ್ಡ ದೊಡ್ಡ ರಾಜರು, ಚಕ್ರವರ್ತಿಗಳು ಮಹಿಳೆಯನ್ನು ತನ್ನ ದಾಸಿಯಾಗಿ, ಪತ್ನಿಯಾಗಿ, ಉಪಪತ್ನಿಯಾಗಿ ನಡೆಸಿಕೊಂಡ ಉದಾಹರಣೆಗಳು ಇತಿಹಾಸದಲ್ಲಿ ದೊರಕುತ್ತವೆ.

ಶೀಲ ಮತ್ತು ಪಾವಿತ್ರ್ಯದ ಕಲ್ಪನೆಯನ್ನು ಮಹಿಳೆಗೆ ಮಾತ್ರ ಅನ್ವಯ ಮಾಡಿ ಪತಿಯನ್ನು ಬಿಟ್ಟು ಪರ ಪುರುಷನ ಜೊತೆಯಲ್ಲಿ ದೈಹಿಕ ಸಂಪರ್ಕ ಹೊಂದಿದಂಥ ಈಕೆಯನ್ನು ಕ್ರೂರವಾಗಿ ಶಿಕ್ಷಲಾಗುತ್ತಿತ್ತು. ಇಂತಹ ಘಟನೆಯೊಂದನ್ನು ಜ್ಞಾಪಿಸಿಕೊಳ್ಳುವುದು ಸೂಕ್ತವೆಂದು ತಿಳಿದು ಮಹರ್ಷಿ ಗೌತಮನ ಪತ್ನಿ ಅಹಲ್ಯೆಯನ್ನು ಇಂದ್ರನು ಬಂದು ಅವಳ ಮೇಲೆ ಬಲತ್ಕಾರ ಮಾಡಿದಾಗ, ಈ ಪ್ರಕರಣವು ಗೌತಮನಿಗೆ ಗೊತ್ತಾಗಿ ಯಾವ ತಪ್ಪು ಮಾಡದ ಅಹಲ್ಯೆಯನ್ನು ಕಲ್ಲಾಗುವಂತೆ ಶಾಪವನ್ನು ಕೊಟ್ಟಿರುವುದು. ರಾಮಾಯಣದಲ್ಲಿ ಮಹಿಳಾ ಶೋಷಣೆಯ ಪ್ರತಿಕವಾಗಿದೆ. ಅದೆನೆಂದರೆ; ರಾವಣಸೂರನ ಸಹೋದರಿಯಾದಂಥ ಸೂರಪನಕಿಯ ಮೂಗು ಮುಂದಲೆಯನ್ನು ಹಾಗೂ ಆಕೆಯ ಎದೆಯ ಭಾಗವನ್ನು

ರಾಮ–ಲಕ್ಷ್ಮಣರು ವಿಕಾರಗೊಳಿಸಿ ಅವಮಾನಿಸಿರುತ್ತಾರೆ. ಇದು ಕೂಡ ಒಂದು ಅಮಾಯಕರವಾದ ಕೃತ್ಯವಾಗಿರುತ್ತದೆ. ಈ ಕಾರಣವಾಗಿಯೇ ಸೀತೆಯನ್ನು ರಾವಣಶೂರನು ತೆಗೆದುಕೊಂಡು ಹೋದಾಗ ಮತ್ತು ಅವನಲ್ಲಿದ್ದ ಕಾರಣಕ್ಕೆ ಸೀತೆಯ ಶೀಲದ ಬಗೆಗೆ ರಾಮನು ಶಂಕಿಸಿ ಅಗ್ನಿ ಪರೀಕ್ಷೆಗೆ ಗುರಿಯಾಗುವಂತೆ ಆದೇಶ ನೀಡಿರುವುದು. ಮಹಾಭಾರತದಲ್ಲಿ ದ್ರೌಪದಿಯನ್ನು ಧರ್ಮರಾಯನ್ನು ಒಬ್ಬ ಮಹಿಳೆ ಎಂದು ಸಹ ನೋಡದೇ ಆಕೆಯನ್ನು ಭೋಗದ ವಸ್ತುವಾಗಿ ಪರಿಗಣಿಸಿ ತನ್ನ ಚಟದ ಜೂಜಾಟಕ್ಕೆ ಪಣವಾಗಿ ಇಟ್ಟಿರುವುದು. ಈ ತರಹದ ಅನೇಕ ಪ್ರಕರಣಗಳು ಅನೇಕ ಅನೇಕ ಮಹಾನ್ ಕಾವ್ಯ ಹಾಗೂ ಪುರಾಣಗಳಲ್ಲಿಯೇ ಮಹಿಳೆಯರನ್ನು ಹೀನಾಯವಾಗಿ ಹಾಗೂ ಶೋಷಣೆಯನ್ನು ಮಾಡುತ್ತಿದ್ದ ರೀತಿ–ನೀತಿಗಳನ್ನು ಗುರುತಿಸಬಹುದು.

ಬಾಲ್ಯ ವಿವಾಹ ಪದ್ಧತಿಯ ಮೂಲಕ ಹೆಣ್ಣನ್ನು ಬಹುಬೇಗನೆ ಮದುವೆಯಾಗಿ ಅವಳು ಮಕ್ಕಳನ್ನು ಹಡೆಯುವ ವಸ್ತುವಾಗಿ ನಡೆಸಿಕೊಂಡಿದ್ದರ ಜೊತೆಗೆ ತನ್ನ ಪತಿಯೂ ಮರಣ ಹೊಂದಿದಕೂಡಲೇ ಅವನ ಜೊತೆಗೆ ಈಕೆಯೂ ಸಹ ಸಾಯುವಂತೆ ಮಾಡಲು ಸತಿಪದ್ಧತಿಯನ್ನು ಧಾರ್ಮಿಕ ಕಾನೂನು ಕಟ್ಟಳೆಯಾಗಿ ವಿಧಿಸಲಾಗಿರುತ್ತದೆ. ಮಹಾಭಾರತದಲ್ಲಿ ಪಾಂಡು ರಾಯನು ಸತ್ತಾಗ ಎರಡನೇಯ ಸತಿಯಾಗಿದ್ದಂಥ ನಕುಲ ಸಹದೇವರ ಮಾತೆಯಾಗಿದ್ದ ಈ ಮಾದ್ರಿಯನ್ನು ಸತಿಪದ್ಧತಿಗೆ ಆಹುತಿ ಆಗಿರುವುದು ಕೂಡ ಸತ್ಯ ಸಂಗತಿಯೇ ಆಗಿರುತ್ತದೆ.

ಒಮ್ಮೊಮ್ಮೆ ಸತಿಪದ್ಧತಿಯಿಂದ ಮಹಿಳೆಯರಿಗೆ ವಿನಾಯಿತಿ ದೊರೆತರೂ ವಿಧವೆಯಾದ ಹೆಣ್ಣು ಮಗಳು ಪುನಃ ಮದುವೆಯಾಗದಂತೆ ನಿರ್ಬಂಧಿಸಲಾಗುತ್ತಿತ್ತು. ಈ ಎಲ್ಲಾ ಕಟ್ಟುಪಾಡುಗಳ ನಡುವೆ ಮಹಿಳೆ ತನ್ನ ಬದುಕನ್ನು ಸಾಗಿಸುತ್ತಿದ್ದಳು. ಮಹಿಳಾ ರಕ್ಷಣೆಯ ಚಿಂತನೆಗಳನ್ನು ಕೇಂದ್ರೀಕೃತವಾದಂಥ ವಿಷಯದ ಮೇಲೆ ಚರ್ಚೆಯ ಆರಂಭವನ್ನು ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿ ಹೆಚ್ಚಿನ ರೀತಿಯಲ್ಲಿ ಗುರುತಿಸಬಹುದು. ಆದರೂ ಅದಕ್ಕೆ ಪೂರ್ವ ಪೀಠಿಕೆಯಾಗಿ ಬ್ರಿಟಿಷ್ ಪೂರ್ವ ಭಾರತದಲ್ಲಿನ ಮಹಿಳೆಯ ಸ್ಥಿತಿಗತಿಯನ್ನು ಗುರುತಿಸಿಕೊಳ್ಳವುದು ಅಗತ್ಯ. ಆದರೂ ಕೂಡ ಅದು ಅಷ್ಟೇ ವಿವಾದಾಸ್ಪದವೂ ಆಗಿದೆ. ಭಾರತೀಯ ಪರಂಪರೆಯ ದಾಖಲೆಗಳಾಗಿ ಉಳಿಸಿಕೊಂಡಿದ್ದು, ಬ್ರಿಟಿಷರು ಹೆಕ್ಕಿ ಅಥೈಸಿದ್ದು, ಎಲ್ಲವೂ ಬಹುಪಾಲು ಸಮಾಜದ ಮೇಲುಸ್ತರದ ಮಾದರಿಗಳನ್ನು ಮಾತ್ರ ಎಂಬ ಅಭಿಪ್ರಾಯವು ಇಂದು ಸ್ಪಷ್ಟವಾಗಿ ಘೋಚರ ಆಗುತ್ತದೆ.

ಆಧುನಿಕ ಕಾಲ ಸಂದರ್ಭದಲ್ಲಿ ಮಹಿಳಾ ವಿಮೋಚನಾ ಧ್ವನಿಗಳ ಚಿಂತನೆಗಳು ಹತ್ತು–ಹಲವು ನೆಲೆಯಲ್ಲಿ ಬಹುಮುಖ್ಯ ವಾದಂಥ ಚರ್ಚಿತ ವಿಷಯವೇ ಆಗಿರುತ್ತದೆ. ಈ ನೆಲೆಯಲ್ಲಿ ಮಹಿಳಾ

ವಿಮೋಚನೆಯ ಪ್ರಶ್ನೆ ಬಂದಾಗ ಮಹಿಳೆಯ ಪ್ರಾತಿನಿಧತ್ವದ ಪ್ರಶ್ನೆಯೂ ಜೊತೆಗೆ ಇರುವುದನ್ನು ಗುರುತಿಸಬಹುದು. ಪ್ರಧಾನವಾಗಿ ಸಾಮಾಜಿಕ ವ್ಯವಸ್ಥೆಯಲ್ಲಿಯ ಸಂದರ್ಭದಲ್ಲಿಯೂ ಮಹಿಳೆಯು ಬೇರೆಬೇರೆ ನೆಲೆಗಳಲ್ಲಿ ವಿಮೋಚನೆಗೊಂಡಿರುವುದು ಕೂಡ ಕಂಡುಬರುತ್ತದೆ. ಸಿದ್ಧ ಮೌಲ್ಯಗಳನ್ನು ಪ್ರತಿನಿಧಿಸುವ ಪುರಾಣಗಳಲ್ಲಿನ ಮಹಿಳಾ ಪ್ರತಿನಿಧಿತ್ವದ ಪಾತ್ರಗಳು ಕೂಡ ವಾಸ್ತವದಲ್ಲಿ ಮಹಿಳೆಯು ಹೀಗೆಯೇ ಇರಬೇಕು ಎಂಬ ಅಲಿಖಿತ ಕಾನೂನು ಹಾಗೂ ಆದರ್ಶವನ್ನು ಮುಂದಿಡುತ್ತವೆ. ಆದರ್ಶ ಮಹಿಳೆಯರನ್ನು ಪ್ರತಿನಿಧಿಸುವ ಸಂದರ್ಭದಲ್ಲಿ ಮಹಿಳೆಯ **'ಕಪ್ಪು–ಬಿಳುಪು'** ಪಾತ್ರಗಳ ನಡುವೆ ಸಂಘರ್ಷ ಏರ್ಪಡುತ್ತದೆ. ವಿಜಯವನ್ನು ಸಾಧಿಸುವ ಬಿಳುಪು ಪಾತ್ರವು ಆದರ್ಶ ಮಹಿಳೆಯ ವ್ಯಕ್ತಿತ್ವವನ್ನು ಕಟ್ಟಿಕೊಡುತ್ತದೆ. ಈ ಆದರ್ಶ ಮಹಿಳೆಯ ಚೌಕಟ್ಟನ್ನು ಮೀರುವ ಮಹಿಳೆಯರು ವಿರುದ್ಧ ನೆಲೆಯಲ್ಲಿ ಪ್ರತಿನಿಧೀಕರಣಗೊಳ್ಳುತ್ತಾರೆ. ಇದು ಹಿಂದೂ ಧರ್ಮದಲ್ಲಿನ ಮಹಿಳೆಯರ ಕುರಿತ ಗ್ರಹೀತ.

ಮಹಿಳೆಯರು ಬೇರೆ ಬೇರೆ ನೆಲೆಗಳಲ್ಲಿ ಆಯಾಯ ಧರ್ಮಗಳನ್ನು ಪ್ರತಿನಿಧಿಸುತ್ತಾರೆ. ಹೀಗೆ ಧರ್ಮಗಳನ್ನು ಪ್ರತಿನಿಧಿಸುವ ಪ್ರತಿಯೊಬ್ಬ ಮಹಿಳೆಯೂ ಪುರುಷ ಕಲ್ಪಿತ ಮಹಿಳೆಯೇ ಆಗಿರುತ್ತಾಳೆ. ಆಯಾ ಧರ್ಮಗಳ ಧಾರ್ಮಿಕ ಮುಖಂಡರು ಮಹಿಳೆಯರಿಗೆ ಘೋಷಿಸುವ ಸ್ವಾತಂತ್ರ್ಯ ಪುರುಷವಾದಿ ಗ್ರಹಿಕೆಯ ಸ್ವಾತಂತ್ರ್ಯ. ಆರಾಧನಾ ನೆಲೆಯಲ್ಲಿ ಮಹಿಳೆಯನ್ನು ಗ್ರಹಿಸುವ ಕಾರಣದಿಂದ ಅದಕ್ಕೆ ಪರ ಮತ್ತು ವೈರುಧ್ಯದ ವ್ಯಕ್ತಿತ್ವಗಳು ರೂಪುಗೊಂಡಿವೆ. ಈ ಹಿನ್ನೆಲೆಯನ್ನು ಆಧರಿಸಿಯೇ ಮಹಿಳಾ ರಕ್ಷಣೆಯ ಧ್ವನಿಗಳು ತಮ್ಮದೇ ಆದಂಥ ರೀತಿಯಲ್ಲಿ ಪಕ್ಷಸಹಿತವಾಗಿ ಚಿಂತನೆಗಳನ್ನು ನಡೆಸಿರುತ್ತಾರೆ. ಅವುಗಳು ಹೆಚ್ಚು ಪ್ರಸ್ತುತವೆನಿಸುತ್ತವೆ. ಅದು ಮುಂದೆ ಮಹಿಳೆಯರಿಗೆ ಸಂವಿಧಾನಾತ್ಮಕ ಸಂರಕ್ಷಣೆಗಳನ್ನು ಶಾಶ್ವತವಾಗಿ ಒದಗಿಸಿಕೊಡಲು ನಾಂದಿಯೇ ಆಗಿರುತ್ತದೆ.

ಧರ್ಮಕ್ಕೂ ಕುಟುಂಬಕ್ಕೂ ನೇರವಾದ ಸಂಬಂಧವಿದೆ. ಧರ್ಮ ಹಾಗೂ ಕುಟುಂಬಗಳು ಪುರುಷ ಕೇಂದ್ರಿತವೇ ಆಗಿವೆ. ಆ ಕಾರಣದಿಂದ ಕುಟುಂಬ ಮತ್ತು ಧರ್ಮದ ಯಾಜಮಾನ್ಯ ಪುರುಷರದೇ ಆಗಿರುತ್ತದೆ. ಮಹಿಳೆ ಎರಡು ಸಂದರ್ಭಗಳಲ್ಲೂ ದ್ವಿತೀಯ ದರ್ಜೆಯವಳೇ ಆಗಿರುತ್ತಾಳೆ. ಅವಳು ನಿರ್ವಹಿಸುವ ಕೆಲಸಗಳೂ ದ್ವಿತೀಯ ದರ್ಜೆಯದಾಗಿರುತ್ತವೆ. ಆ ಕಾರಣದಿಂದ ಬೌದ್ಧಿಕ ವಲಯದಲ್ಲಿ ಅವಳ ಗೈರುಹಾಜರಿ ಎದ್ದು ಕಾಣುತ್ತದೆ. **'ಮಹಿಳೆಯರ ಬುದ್ಧಿ ಮೊಣಕಾಲ ಕೆಳಗೆ'** ಎಂಬ ಉಕ್ತಿಗಳನ್ನು ಸಮಾಜದಲ್ಲಿ ತೇಲಿ ಬಿಡುವ ಮೂಲಕ ಮಹಿಳೆಯನ್ನು ಅಧಿಕೃತವಾಗಿ ಮುಖ್ಯವಾಹಿನಿಯಿಂದ ಅವಗಣನೆ ಮಾಡಲಾಗುತ್ತದೆ. ಸ್ಥಿರೀಕೃತ ಪಿತೃ ಮೌಲ್ಯಗಳನ್ನು ಪೊರೆದುಕೊಂಡು ಬರುವಲ್ಲಿ ಕುಟುಂಬ ಬಹುಮುಖ್ಯವಾದಂಥ ಪಾತ್ರವನ್ನು ನಿರ್ವಹಿಸುತ್ತದೆ. ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ಖಾಸಗಿ ಸ್ಥಳಗಳಲ್ಲಿ

ಮಹಿಳೆ ಯಾವ ರೀತಿ ವರ್ತಿಸಬೇಕು ಎಂಬುದನ್ನು ಪಿತೃಮೌಲ್ಯ ಪ್ರೇರಿತ ಕುಟುಂಬ ನಿರ್ಧರಿಸುತ್ತದೆ. ಪುರುಷ ಮೌಲ್ಯಗಳನ್ನು ಪ್ರತಿನಿಧಿಸುವ ಮಹಿಳೆಯು ವ್ಯವಸ್ಥೆಯ ಭಾಗವೇ ಆಗಿದ್ದಾಳೆ. ಪುರುಷ ಮೌಲ್ಯಗಳನ್ನು ಅರಗಿಸಿಕೊಂಡು ತನ್ನ ಬದುಕಾಗಿಸಿದ ಮಹಿಳೆಯ ಅದೇ ಸತ್ಯ ಎಂದು ಭ್ರಮಿಸಿ ಅದರಲ್ಲೇ ಜೀವಿಸುತ್ತಿದ್ದಾಳೆ. ಸ್ವತಂತ್ರ ಬದುಕಿನ ಕಲ್ಪನೆಯೇ ಅವಳಿಗೆ ಇಲ್ಲವಾಗಿದೆ. ದೇವಿಯಾಗಿ ಆರಾಧನೆಗೊಳ್ಳುವ ಮಹಿಳೆಯು ಪುರುಷ ಪ್ರಧಾನ ಕುಟುಂಬದಲ್ಲಿ ಬಹುದೊಡ್ಡ ಹೊರೆಯಾಗಿ ಕಂಡುಬರುತ್ತಾಳೆ.

ಭಾರತದಲ್ಲಿ ಇದ್ದಂಥ ಸಾಮಾಜಿಕ ಪಿಡುಗುಗಳನ್ನು ನಿವಾರಿಸುವಲ್ಲಿ ಅನೇಕ ಮಹಾನ್ ಸುಧಾರಕರು ತಮ್ಮದೇ ಆದಂಥ ರೀತಿಯಲ್ಲಿ ನಿರ್ವಹಿಸಿರುವ ಪಾತ್ರವೂ ಪ್ರಾಮುಖ್ಯವಾದದು. ಮಹಿಳೆಯರಲ್ಲಿರುವಂಥ ಪ್ರಚಂಡ ಶಕ್ತಿಯನ್ನು ಸಂವಿಧಾನದ ಕೆಂಪು ಬಟ್ಟೆಯಲ್ಲಿ ಕಟ್ಟಿ ಗಾಳಿಗೆ ತೂರುವ ಸನಾತನ ಮನಸ್ಸುಗಳೇ ಇವತ್ತು ಎಲ್ಲೆಡೆ ಗಟ್ಟಿಗೊಂಡಿವೆ. ಒಂದು ಸಮಾಜದ ಅಳಿವು–ಉಳಿವು ಎರಡಕ್ಕೂ ಈ ದೇಶದ ಶ್ರಮ ಜೀವಿಯಾದ ಮಹಿಳೆ ಜನಸಮುದಾಯವು ಬಹುಮುಖ್ಯವಾಗಿಯೇ ಕಾರಣವಾಗಿರುತ್ತದೆ. ಇಂಥ ಯಾವುದೇ ಫಲಪ್ರದವನ್ನು ಹಾಗೂ ಅಪೇಕ್ಷೆಯನ್ನು ಪಡದೇ ದುಡಿಯುವ ವ್ಯಕ್ತಿಯ ಮೇಲೆ ಜೀವ ವಿರೋಧಿ ಶಕ್ತಿಗಳು ಶತಶತಮಾನಗಳಿಂದ ಅವರನ್ನು ನಿರಂತರವಾಗಿ ಗುಲಾಮಗಿರಿಗೆ ತಳ್ಳಿದ್ದಾರೆ. ಹಾಗಾಗಿ ಈ ಜನವರ್ಗಗಳನ್ನು ಒಂದಲ್ಲಾ ಒಂದು ಕಾರಣದಿಂದ ನಿತ್ಯವೂ ಶೋಷಸುತ್ತಾ, ದೌರ್ಜನ್ಯವನ್ನು ಮಾಡುತ್ತಾ, ಬಂದಿರುವುದು ಪ್ರಜಾಪ್ರಭುತ್ವಕ್ಕೆ ಬಹುದೊಡ್ಡದೊಂದು ಸವಾಲೇ ಆಗಿರುತ್ತದೆ. ಸನಾತನಿ ವೈದಿಕ ಧರ್ಮವು ಮಹಿಳೆಯರನ್ನು ಅನಾದಿಕಾಲದಿಂದಲೂ ಒಂದು ಸಾಕು ಪ್ರಾಣಿಯಂತೆ ನೋಡಿಕೊಂಡೆ ಬಂದಿವೆ. ಆದ್ದರಿಂದ ಭಾರತದ ಸಾಮಾಜಿಕ ವ್ಯವಸ್ಥೆಯ ಸಂದರ್ಭದಲ್ಲಿ ಮಹಿಳೆಯರನ್ನು ಅತ್ಯಂತ ಅಮಾನವೀಯವಾಗಿ ಪುರುಷ ಸಮಾಜವು ಕಾಣುತ್ತಾ ಬಂದಿದೆ. ಈ ಕಾರಣದಿಂದ ಮಹಿಳೆಯನ್ನು ತಮ್ಮ ಹಿಡಿತದಲ್ಲಿ ಸದಾ ಇಟ್ಟುಕೊಂಡೇ ಬಂದಿದ್ದಾರೆ. ಮಹಿಳೆ ಸದಾ ಅಬಲೆ, ಅವಳು ಸ್ವತಂತ್ರವಾಗಿ ಬದುಕಬಾರದು. ಇನ್ನೊಬ್ಬರ ಆಶ್ರಯದಲ್ಲಿಯೇ ಇರಬೇಕು. ಹಾಗೇನಾದರೂ ಅವಳಿಗೆ ಸ್ವತಂತ್ರ್ಯ ನೀಡಿದರೆ, ದೇಶದ ಸಂಸ್ಕೃತಿ ಹಾಳಾಗುತ್ತದೆ ಎಂದು ತಿಳಿದುಕೊಂಡಿರುವಂಥ ಪುರುಷ ಸಮಾಜ ಅವಳಿಗೆ ಧರ್ಮ ಮತ್ತು ದೇವರ ಹೆಸರಿನಲ್ಲಿ ಸಾಂಪ್ರದಾಯಿಕವಾಗಿ ಕಾನೂನು ಕಟ್ಟಲೆ ರೂಪಿಸಿತು. ಈ ವೈದಿಕ ಕಾನೂನು ಕಟ್ಟಳೆಯಿಂದ ಮಹಿಳೆಯು ದೈಹಿಕ ಮತ್ತು ಮಾನಸಿಕವಾಗಿ ಶೋಷಣೆಗೆ ಒಳಗಾಗಿ ತನ್ನ ವ್ಯಕ್ತಿತ್ವ–ಅಸ್ಥಿತ್ವ ಹಾಗೂ ಸ್ವತಂತ್ರ್ಯವನ್ನು ಕಳೆದುಕೊಂಡಳು. ಹೀಗೆ ಶತಶತಮಾನಗಳಿಂದ ಶೋಷಣೆಗೆ ಒಳಪಟ್ಟ ಮಹಿಳೆಯರಿಗೆ ಸ್ವಾತಂತ್ಯ ಮತ್ತು ಸಮಾನತೆಯನ್ನು ಒದಗಿಸುವುದಕ್ಕೆ ಭಾರತೀಯ ಸಂವಿಧಾನದ ಸೃಷ್ಠಿಕರ್ತರು ಪ್ರಥಮ ಆದ್ಯತೆಯಾಗಿರುತ್ತದೆ. ಹಾಗಾಗಿಯೇ "ಭಾರತೀಯ ಸಮಾಜದಲ್ಲಿ ಮಹಿಳೆಯ ಸ್ಥಾನಮಾನವು ಅಸ್ಪೃಶ್ಯರ ಸ್ಥಿತಿಗಿಂತ ಭಿನ್ನವಾಗಿರಲಿಲ್ಲ ಅವರಿಗೆ ಯಾವುದೇ ಹಕ್ಕುಗಳು ಇರಲಿಲ್ಲ." ಈ ಮಹಿಳೆಯು ತಾಯಿಯ

ಮಡಿಲಿನಿಂದಲೇ ತರಬೇತಿ ಹೊಂದಿ, ಅದಕ್ಕಾಗಿ ಸೇವೆ ಮತ್ತು ತ್ಯಾಗಕ್ಕೆ ಆಕೆಯನ್ನು ಒಳಪಡಿಸಲಾಗಿತ್ತು. ಪುರುಷರು ಆಕೆಯ ಯಜಮಾನನಾಗಿ, ಹಾಗೆಯೇ ದಾನಿಯಾಗಿರುತ್ತಾನೆ.

ಮಹಿಳೆಯು ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದಿದ್ದರಿಂದ ಪರಾವಲಂಬಿಯಾಗಿದ್ದಳು. ಈ ರೀತಿಯ ಶಕ್ತಿಕುಂದಿಸುವ ಅಯೋಗ್ಯ ಸನ್ನಿವೇಶದಲ್ಲಿ ಮಹಿಳೆಯು ಭಾರತೀಯ ಸಮಾಜದಲ್ಲಿ ಬದುಕುತ್ತಿದ್ದಳು. ಪುರುಷನು ಮಹಿಳೆಯರ ಮೇಲೆ ಹೊಂದಿರುವ ಸಮಸ್ತದ ದುರಾಭಿಮಾನದಿಂದ ಆಕೆಯನ್ನು ಶೋಷಿಸಿ, ದುಷ್ಟ ರೀತಿಯಲ್ಲಿ ನಡೆಸಿಕೊಳ್ಳುತ್ತಿದ್ದರು. ಇದು ಸಗಣಿಯ ಗುಡ್ಡದಂತಿರುವ ಭಾರತೀಯ ಸನಾತನಿ ಧಾರ್ಮಿಕ ಗ್ರಂಥಗಳು ಆಕೆಯ ಸ್ಥಾನ–ಮಾನವನ್ನು ವಿಕೃತ ರೂಪದಲ್ಲಿ ಹಾಗೂ ಹೀನಾಯವಾಗಿ ಚಿತ್ರಿಸಿವೆ. "ಮಹಿಳೆಯರು ಇತರರಂತೆ ಮೂಲಭೂತವಾಗಿರುವ ಮಾನವೀಯತೆಯನ್ನು ಪ್ರಾರಂಭದಿಂದಲೂ ದೈಹಿಕ ಹಾಗೂ ಬೌದ್ಧಿಕ ನೆಲೆಗಟ್ಟಿನ ಮೇಲೆ ಕೀಳರಿಮೆಯಿಂದಲೇ ನೋಡಲಾಗಿದೆ.

ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯರನ್ನು ಶೋಷಣೆಯಿಂದ ಮುಕ್ತಿಗೊಳಿಸುವದರ ಜೊತೆಗೆ ಅವರಿಗೂ ಸಮಾನವಾದಂಥ ಹಕ್ಕು ಹಾಗೂ ಅವಕಾಶಗಳನ್ನು, ಸಂವಿಧಾನದಲ್ಲಿ ಮಹಿಳೆಯರಿಗಾಗಿ ಅನೇಕ ವಿಧಿಗಳನ್ನು ಅಳವಡಿಸಿದರು. ಭಾರತದ ಸಾಮಾಜಿಕ ಸಂರಚನೆ ಚತ್ಯುರ್ವರ್ಣ ಹಾಗೂ ಪಿತೃ ಪ್ರಧಾನವಾದದ್ದು ಮತ್ತು ಇದರಲ್ಲಿ ಮಹಿಳೆಯ ಪಾತ್ರ ಈ ಸಾಮಾಜಿಕ ವ್ಯವಸ್ಥೆಯಿಂದ ರೂಪುಗೊಂಡಿರುವಂಥದ್ದು. ಮಹಿಳೆಯು ಈ ಸಾಮಾಜಿಕ ಚೌಕಟ್ಟಿನಲ್ಲಿ ಕಾರ್ಯವನ್ನು ನಿರ್ವಹಿಸಬೇಕಾಗಿದೆ. ಈ ತಾರತಮ್ಯ ಭಾವನೆಯನ್ನು ತೊಡೆದುಹಾಕುವುದಕ್ಕಾಗಿ ಕಾನೂನು ಸುಧಾರಣಾ ಕ್ರಮಗಳ ಪೂರ್ವದಲ್ಲಿ ಸಮಾಜ ಸುಧಾರಣೆಯ ಆಂದೋಲನಗಳಾಗಿ ರೂಪುಗೊಂಡಿರುವುದನ್ನು 19ನೇ ಶತಮಾನದಲ್ಲಿ ಕಾಣಬಹುದು. ಅಂದು ಪ್ರಾರಂಭಗೊಂಡ ಈ ಸುಧಾರಣಾ ಆಂದೋಲನಗಳು ರಾಷ್ಟ್ರೀಯ ಹೋರಾಟದ ಕಾಲದಿಂದ ಇಂದಿನ ಸಮಕಾಲೀನ ಮಹಿಳಾ ಚಳವಳಿಗಳೊಂದಿಗೆ ಮುಂದುವರಿಸಿಕೊಂಡು ಬಂದಿವೆ".

ಭಾರತಕ್ಕೆ ಹಲವು ವರ್ಷಗಳ ಹೋರಾಟದ ಫಲವಾಗಿಯೇ ಬ್ರಿಟಿಷರಿಂದ ಬಿಡುಗಡೆಗೊಂಡು ತನ್ನದೇ ಆದಂಥ ಒಂದು ತಜ್ಞರ ಸಂವಿಧಾನ ರಚನಾ ಸಭೆಯಿಂಬ ರಚಿತಗೊಂಡಿರುವ ಈ ಸಂವಿಧಾನದಲ್ಲಿ ಭಾರತೀಯ ನಾಗರಿಕರೆಲ್ಲರಿಗೂ ಸಮಾನ ಹಕ್ಕು ಹಾಗೂ ಅಧಿಕಾರಗಳನ್ನು ಬೇಧವಿಲ್ಲದೆ ನೀಡಲಾಗಿದೆ. ಜೊತೆಗೆ ಬಾಲ್ಯವಿವಾಹವನ್ನು ಕಾನೂನುಬಾಹಿರವೆಂದು ಘೋಷಿಸಿ, ವಿಧವೆಯರ ಪುನರ್ವಿವಾಹವನ್ನು ಮನ್ನಿಸಲಾಗಿದೆ. ಹಾಗೆಯೇ, ಪುರುಷ ಮತ್ತು ಮಹಿಳೆಯರಿಬ್ಬರಿಗೂ ವಿವಾಹ ವಿಚ್ಛೇದನದ ಹಕ್ಕು ಸಮಾನವಾಗಿಯೇ ದೊರೆತಿದೆ. ಇದೇ ಅಲ್ಲದೇ ಪಿತ್ರಾರ್ಜಿತ ಆಸ್ತಿಗೆ ಮಗನಂತೆ ಮಗಳೂ ಹಕ್ಕುದಾರಳು

ಎಂದು ಘೋಷಿಸಲಾಗಿದೆ. ಈ ಎಲ್ಲಾ ಸುಧಾರಣಾ ಕಾನೂನುಗಳು ಮಹಿಳೆಯನ್ನು ಮನವೋತ್ತಮ ಸ್ಥಾನದಲ್ಲಿ ಗೌರವಿಸಲು ಸಹಕಾರಿಯಾಗಿದೆ. ಸಂವಿಧಾನದಲ್ಲಿ ಹತ್ತು-ಹಲವು ವಿಧಿ-ವಿಧಾನಗಳನ್ನು ಮಹಿಳೆಯರಿಗಾಗಿಯೇ ವಿಶೇಷ ನೀಡಲಾಗಿದೆ. ಅವುಗಳನ್ನು ಈ ಕೆಳಕಂಡಂತೆ ದಾಖಲಿಸಲಾಗಿದೆ. ಅವುಗಳೆಂದರೆ;

- **15(1)ನೇ ವಿಧಿಯು** ಲಿಂಗ ಆಧಾರಿತ ತಾರತಮ್ಯವನ್ನು ನಿಷೇಧಿಸಿದೆ.
- **15(3)ನೇ ವಿಧಿಯು** ಮಹಿಳೆಯರಿಗೆ ವಿಶೇಷವಾದಂಥ ನಿಯಮವಾಗಿದೆ.
- **16(2)ನೇ ವಿಧಿಯು** ಸಾರ್ವಜನಿಕ ಸೇವೆಗಳಲ್ಲಿ ಸಮಾನ ಅವಕಾಶವನ್ನು ಕಲ್ಪಿಸಿದೆ.
- **39(ಆ)ನೇ ವಿಧಿಯು** ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಕೊಡಬೇಕೆಂದು ಸೂಚಿಸಿದೆ.
- **42ನೇ ವಿಧಿಯು** ಹೆರಿಗೆ ಸೌಲಭ್ಯವನ್ನು ಕಲ್ಪಿಸಿದೆ.
- **51(ಒ)ನೇ ವಿಧಿಯು** ಮಹಿಳೆಯ ಗೌರವ ರಕ್ಷಣೆಯನ್ನು ನೀಡಿರುತ್ತದೆ.
- **51(ಇ)ನೇ ವಿಧಿಯು** ಮಹಿಳೆಯರ ಗೌರವಕ್ಕೆ ಕುಂದುಂಟುಮಾಡುವಂಥ ಆಚರಣೆಗಳನ್ನು ಬಿಟ್ಟುಬಿಡುವುದು.
- **243(ಆ) ಮತ್ತು 243(ಐ)** ಸ್ಥಳೀಯ ಸರ್ಕಾರಗಳಲ್ಲಿ ಶೇಕಡಾ 1/3ರಷ್ಟು ಸ್ಥಾನಗಳನ್ನು ಮೀಸಲಿಡಲಾಗಿದೆ ಎಂದು ಸೂಚಿಸಿರುತ್ತದೆ.

ಈ ವಿಧಿಗಳನ್ನು ಜಾರಿಯಲ್ಲಿದ್ದರೂ ಕೂಡ ಅಲ್ಲಲ್ಲಿ ಇವರ ಮೇಲೆ ಶೋಷಣೆ, ದೌರ್ಜನ್ಯಗಳು ನಡೆಯುತ್ತಲೇ ಇದೇ. ಆದ್ದರಿಂದ ಕಾಲಕಾಲಕ್ಕೆ ಆಡಳಿತಕ್ಕೆ ಬಂದಿರುವಂಥ ಜನಪ್ರತಿನಿಧಿ ಸರ್ಕಾರಗಳು ಸಮಯ, ಸಂದರ್ಭಗಳಿಗೆ ಅನುಗುಣವಾಗಿ ಕಾಯಿದೆಗಳನ್ನು ಜಾರಿಗೆ ತರಲಾಗಿದೆ. ಮಹಿಳೆಯರ ಮೇಲೆ ನಡೆಯುತ್ತಿರುವ ನಿರಂತರವಾದ ಶೋಷಣೆಯನ್ನು ನಿಷೇಧಿಸುವ ಸಲುವಾಗಿ ಸಂವಿಧಾನದಲ್ಲಿ ಒದಗಿಸಲಾಗಿರುವ ರಕ್ಷಣೆಗಳಿಗೆ ಪೂರಕವಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅನೇಕ ಕಾಯಿದೆಗಳನ್ನು ಜಾರಿಗೆ ತಂದಿರುತ್ತವೆ. ಈ ಕಾಯಿದೆಗಳು ಸ್ವತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯನಂತರದಲ್ಲಿ ಜಾರಿಗೊಂಡಿರುತ್ತದೆ. ಅವುಗಳೆಂದರೆ;

- 1829ರ ಸತಿ ನಿಷೇಧ ಕಾಯಿದೆ
- 1929ರ ಬಾಲ್ಯ ವಿವಾಹ ನಿಷೇಧ ಕಾಯಿದೆ
- 1856ರ ವಿಧವಾ ಪುನರ್ ವಿವಾಹ ಕಾಯಿದೆ

- 1872ರ ನಾಗರಿಕ ವಿವಾಹ ಕಾಯಿದೆ
- 1954ರ ವಿಶೇಷ ವಿವಾಹ ಕಾಯಿದೆ
- 1955ರ ಹಿಂದೂ ವಿವಾಹ ಕಾಯಿದೆ
- 1956ರ ಹಿಂದೂ ಉತ್ತರಾಧಿಕಾರದ ಕಾಯಿದೆ
- 1956ರ ಹಿಂದೂ ಅಪ್ರಾಪ್ತ ವಯಸ್ಕ ಮತ್ತು ರಕ್ಷಕನ ಕಾಯಿದೆ
- 1956ರ ದತ್ತು ಸ್ವೀಕಾರ ಮತ್ತು ಜೀವನಾಂಶದ ಕಾಯಿದೆ
- 1956ರ ಕನ್ಯೆಯರ ಮತ್ತು ಮಹಿಳೆಯರ ಅನೈತಿಕ ಹೊಂದಲು ಹಣ ಬೇಕು ಆ ವ್ಯವಹಾರ ಪ್ರತಿಬಂಧಕ ಕಾಯಿದೆ
- 1961ರ ವರದಕ್ಷಿಣೆ ನಿಷೇಧ ಕಾಯಿದೆ
- 1961ರ ಹೆರಿಗೆ ಸೌಲಭ್ಯ ಕಾಯಿದೆ
- 1976ರ ಸಮಾನ ವೇತನ ಕಾಯಿದೆ
- 1976ರ ಕಾರ್ಖಾನೆಗಳ (ತಿದ್ದುಪಡಿ) ಕಾಯಿದೆ
- 1978ರ ನಾಗರಿಕ ವಿವಾಹ ನಿಗ್ರಹಣ (ತಿದ್ದುಪಡಿ) ಕಾಯಿದೆ
- 1986ರ ಮಹಿಳೆಯರ ಅಸಭ್ಯ ಪ್ರತಿನಿಧಿಸುವಿಕೆಯ ನಿಷೇಧ ಕಾಯಿದೆ
- 1986ರ ಮುಸ್ಲಿಂ ಮಹಿಳೆಯರ (ವಿಚ್ಛೇದನದ ನಂತರ ಹಕ್ಕುಗಳ ರಕ್ಷಣಾ) ಕಾಯಿದೆ
- 1994ರ ಭ್ರೂಣ ಲಿಂಗ ಪತ್ತೆ ನಿಷೇಧ ಕಾಯಿದೆ
- 2013ರ ಅತ್ಯಾಚಾರ ನಿಷೇಧ ಕಾನೂನು
- 2013ರ ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ತಡೆ ಕಾಯಿದೆ
- ಮುಸ್ಲಿಂ ಮಹಿಳೆ ಮತ್ತು ಆಸ್ತಿಯ ಹಕ್ಕು
- ಕ್ರೈಸ್ತ ಮತ್ತು ಪಾರ್ಸಿ ಮಹಿಳೆಯರು.

ಹೀಗೆ, ಭಾರತೀಯ ನೆಲದಲ್ಲಿ ಮಹಿಳೆಯರಿಗೆ ಆಗುತ್ತಿದ್ದಂಥ ಶತಶತಮಾನಗಳ ದೌರ್ಜನ್ಯ, ದಬ್ಬಾಳಿಕೆಯಂಥ ಕ್ರೂರ ಸ್ಥಿತಿಗಳಿಂದ ಬಿಡುಗಡೆಗೊಳಿಸಲು ಭಾರತೀಯ ಸಂವಿಧಾನದಲ್ಲಿ ಹಲವು ಹತ್ತು

ವಿಧಿಗಳು ಹಾಗೂ ಅವುಗಳನ್ನು ಆಧರಿಸಿ ಸಂಸತ್ತು ಕಾಲಕಾಲಕ್ಕೆ ರಚಿಸಿ ಹೊರತಂದಿರುವಂಥ ಕಾಯಿದೆ ಮತ್ತು ಕಾನೂನುಗಳು ಕೂಡ ಮಹಿಳೆಯರ ಹಕ್ಕುಗಳ ಉಲ್ಲಂಘನೆಯನ್ನು ತಡೆಯುವಲ್ಲಿ ತಮ್ಮದೇ ಆದಂಥ ಕಾರ್ಯವಿಧಾನವನ್ನು ಮಾಡುತ್ತಿವೆ ಎಂಬುದು ತಿಳಿದು ಬಂದಿರುತ್ತದೆ.

**ಪರಾಮರ್ಶನ ಗ್ರಂಥಗಳು**

1. ಭಾರತ ಸಂವಿಧಾನ, ( ಕನ್ನಡ ಆವೃತಿ), 2018
2. ರಾಜಶೇಖರ್, ಎಸ್. ಭಾರತೀಯ ಸಮಾಜ, 2001
3. ಡಾ.ಎಂ.ರಾಚಪ್ಪಾಜಿ, ಡಾ.ಎಸ್.ನಾಗರಾಜು, ಮಹಿಳಾ ಚಿಂತನೆಯ ರೂಪಕಗಳು, 2015
4. ಡಾ.ಎಚ್.ಎಂ.ರಾಜಶೇಖರ, ಭಾರತ ಸಂವಿಧಾನ ಮತ್ತು ಸರ್ಕಾರ, 2015
5. ದೇವರಾಜ್, ಡಿ.ಎಲ್. ಭಾರತ ಸಂವಿಧಾನ, 2011
6. ಮೂರ್ತೀಶ್ವರಯ್ಯ. ಬಿ.ಕಾ. ಮಹಿಳೆ ಸಮಾಜ ಮತ್ತು ಕಾನೂನು, 1994
7. ಪ್ರಭು.ಕೆ.ಎಚ್. ಮಹಿಳೆಯರು ಮತ್ತು ಮಕ್ಕಳ ಕಾನೂನು, 1996
8. ಗೀತಾಕೃಷ್ಣಮೂರ್ತಿ, ಮಹಿಳಾ ಹಕ್ಕುಗಳು ಮಾನವಹಕ್ಕುಗಳ ನೆಲೆಯಲ್ಲಿ, 2000